# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 315 |
| ಸದಸ್ಯರ ಹೆಸರು | : | ಶ್ರೀ ಬಿ.ಜಿ. ಪಾಟೀಲ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | : | ಕಂದಾಯ ಸಚಿವರು |
| ಉತ್ತರಿಸುವ ದಿನಾಂಕ | : | 11.12.2024 |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>(ಅ)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಕ್ಫ್‌ಅಸ್ತಿಗಳಿಗೆ ಸಂಬಂಧಿಸಿದಂತೆ ಎಷ್ಟು ರೈತರಿಗೆ ನೋಟಿಸ್ ಜಾರಿ ಮಾಡಲಾಗಿದೆ; ನೋಟಿಸ್ ನೀಡಲು ಸರ್ಕಾರದಿಂದ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಲಾಗಿದೆಯೇ; ಇದ್ದಲ್ಲಿ, ಆದೇಶದ ಪ್ರತಿಯನ್ನು ನೀಡುವುದು: (ತಾಲ್ಲೂಕುವಾರು ಮಾಹಿತಿ ನೀಡುವುದು)</td><td>ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ವಕ್ಫ್‌ಅಸ್ತಿಗಳಿಗೆ ಸಂಬಂಧಿಸಿದಂತೆ ನೋಟೀಸ್ ನೀಡಿರುವ ತಾಲ್ಲೂಕುವಾರು ಮಾಹಿತಿಯು ಈ ಕೆಳಕಂಡಂತಿದೆ:
<table>
<tr><th>ಕ್ರ. ಸಂ</th><th>ತಾಲ್ಲೂಕು</th><th>ನೋಟೀಸ್‌ಗಳ ಸಂಖ್ಯೆ</th></tr>
<tr><td colspan="3">ಕಲಬುರಗಿ ಜಿಲ್ಲೆ</td></tr>
<tr><td>1.</td><td>ಕಲಬುರಗಿ</td><td>0</td></tr>
<tr><td>2.</td><td>ಆಳಂದ</td><td>0</td></tr>
<tr><td>3.</td><td>ಚಿಂಚೋಳಿ</td><td>115</td></tr>
<tr><td>4.</td><td>ಕಮಲ್ಹಾಪುರ</td><td>4</td></tr>
<tr><td>5.</td><td>ಯಡ್ರಾಮಿ</td><td>0</td></tr>
<tr><td>6.</td><td>ಅಫಜಲ್‌ಪುರ</td><td>0</td></tr>
<tr><td>7.</td><td>ಕಾಳಗಿ</td><td>0</td></tr>
<tr><td>8.</td><td>ಜೇವರ್ಗಿ</td><td>0</td></tr>
<tr><td>9.</td><td>ಚಿತ್ತಾಪುರ</td><td>49</td></tr>
<tr><td>10.</td><td>ಶಹಬಾದ್</td><td>0</td></tr>
<tr><td>11.</td><td>ಸೇಡಂ</td><td>0</td></tr>
<tr><td colspan="2">ಒಟ್ಟು</td><td>168</td></tr>
<tr><td colspan="3">ಯಾದಗಿರಿ ಜಿಲ್ಲೆ</td></tr>
<tr><td>1.</td><td>ಯಾದಗಿರಿ</td><td>83</td></tr>
<tr><td>2.</td><td>ವಡಗೇರಾ</td><td>36</td></tr>
<tr><td></td><td>ಒಟ್ಟು</td><td>119</td></tr>
</table>
ರಾಜ್ಯದಲ್ಲಿ ವಕ್ಫ್ ಆಸ್ತಿಗಳಿಗೆ ಸಂಬಂಧಿಸಿದಂತೆ ನೋಟೀಸ್‌ಗಳನ್ನು ನೀಡಲು ಕಂದಾಯ ಇಲಾಖೆಯಿಂದ ಯಾವುದೇ ನಿರ್ದೇಶನ ನೀಡಿರುವುದಿಲ್ಲ. ಆದಾಗ್ಯೂ ಕೆಲವು ಜಿಲ್ಲೆಗಳಲ್ಲಿ ಮಾತ್ರ ವಕ್ಫ್ ಮಂಡಳಿಯ ಗೆಜೆಟ್ ಅಧಿಸೂಚನೆಯ ಮೇರೆಗೆ ನೋಟೀಸುಗಳನ್ನು ನೀಡಿರುವುದು ಕಂಡುಬಂದಿರುತ್ತದೆ.</td></tr>
<tr><td>(ಆ)</td><td>ರೈತರಿಗೆ ನೀಡಿದ್ದ ನೋಟಿಸ್ ಹಿಂಪಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ;</td><td>ಪ್ರಸ್ತುತ ರೈತರ ಹಾಗೂ ಇತರ ಆಸ್ತಿಗಳನ್ನು ವಕ್ಫ್ ಹೆಸರಿಗೆ ಖಾತೆ ಮಾಡುತ್ತಿದ್ದಾರೆ ಎಂಬ ದೂರಿನ ಹಿನ್ನೆಲೆಯಲ್ಲಿ ಕಂದಾಯ ಇಲಾಖೆಯಿಂದ ಸರ್ಕಾರದ ಪತ್ರ ಸಂಖ್ಯೆ:ಕಂಇ 99 ಟಿಆರ್‌ಎಂ</td></tr>
</table>

| | | |
|---|---|---|
| (ಇ) | ರೈತರ ಪಹಣಿಯಲ್ಲಿ ವಕ್ಫ್ ಹೆಸರು ನಮೂದಿಸಿರುವುದರಿಂದ ರೈತರು ಬೆಳೆ ಸಾಲ ಹಾಗೂ ಇನ್ನಿತರೆ ಯೋಜನೆಗಳ ಲಾಭ ಪಡೆಯಲು ಅನಾನುಕೂಲವಾಗಿದ್ದು, ರೈತರ ಪಹಣಿಯಲ್ಲಿ ವಕ್ಫ್ ಹೆಸರು ತೆಗೆಯಲು ಸರ್ಕಾರ ಜಿಲ್ಲಾಡಳಿತಗಳಿಗೆ ಆದೇಶ ನೀಡುವುದು? | 2024, ದಿನಾಂಕ:09.11.2024ರಲ್ಲಿ ಈ ಕೆಳಕಂಡ ನಿರ್ದೇಶನಗಳನ್ನು ನೀಡಲಾಗಿರುತ್ತದೆ :<br>1. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಮ್ಯುಟೇಷನ್ ಮಾಡಲು ಯಾವುದೇ ಕಛೇರಿ ಅಥವಾ ಯಾವುದೇ ಪ್ರಾಧಿಕಾರದಿಂದ ನೀಡಲಾದ ನಿರ್ದೇಶನಗಳನ್ನು ತಕ್ಷಣದಿಂದಲೇ ಹಿಂಪಡೆಯುವುದು ಹಾಗೂ ಮ್ಯುಟೇಷನ್ ಪ್ರಕ್ರಿಯೆಯನ್ನು ಕೂಡಲೇ ಸ್ಥಗಿತಗೊಳಿಸುವುದು;<br>2. ಈ ಕುರಿತು ನೀಡಲಾದ ಎಲ್ಲಾ ನೋಟೀಸುಗಳನ್ನು ಹಿಂಪಡೆಯುವುದು;<br>3. ಸದರಿ ಜಮೀನುಗಳಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳ ವಿರುದ್ಧ ಯಾವುದೇ ಕ್ರಮವನ್ನು ಜರುಗಿಸತಕ್ಕದಲ್ಲ. |

**ಸಂ:ಕಂಇ 241 ಟಿಆರ್ಎಂ 2024** (1601294)

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು